ದಿನಾಂಕ: 12-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುರೆದ ಪಾಟೀಸವಾಲುಃ ಶ್ರೀ.ಬಿ.ಕೆ.ಜೆ. ಪ್ರತಿವಾದಿಯರ ಪರ ವಕೀಲರಿಂದಃ**

21. ದಾವಾ ಜಮೀನು 01ಎ-10ಗು ಸ್ವತ್ತು ಉತ್ತರ-ದಕ್ಷಿಣವಾಗಿದೆಯೋ ದಕ್ಷಿಣ-ಉತ್ತರವಾಗಿದೆಯೋ ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡು ಈಗ 5-6 ವರ್ಷಗಳಾಗಿವೆ. ದಾವಾ ಆಸ್ತಿಯಲ್ಲಿ ಮನೆ ಮತ್ತು ಖುಲ್ಲಾ ಜಾಗಾ ಇದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಮನೆ ಮತ್ತು ಖುಲ್ಲಾ ಜಾಗಾಗಳಿವೆ ಮಧ್ಯದಲ್ಲಿ ರಸ್ತೆ ಇದೆ ಎಂದರೆ ಸರಿ.

22. ಪ್ರತಿವಾದಿಯರೆಲ್ಲರೂ ಶಿಂಧಿಕುರಬೇಟನಲ್ಲಿ ಇರುವ ದಾವಾ ಆಸ್ತಿಗಳಲ್ಲಿಯ ಮನೆ ಮತ್ತು ಖುಲ್ಲಾ ಜಾಗಾಗಲ್ಲಿ ಇದ್ದಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಕೆಲವು ಜನ ಮನೆ ಕಟ್ಟಿರುತ್ತಾರೆ ಮತ್ತು ಕೆಲವು ಜನ ಖುಲ್ಲಾ ಜಾಗಾ ಇಟ್ಟುಕೊಂಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಮನೆಗಳಿಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಶಿಂಧಿಕುರಬೇಟ ಗ್ರಾಮ ಪಂಚಾಯತಿ ದಾಖಲೆಗಳಲ್ಲಿ ದಾವಾ ಆಸ್ತಿಯಲ್ಲಿಯ ಮನೆ ಮತ್ತು ಖುಲ್ಲಾ ಜಾಗಾಗಳಿಗೆ ಪ್ರತಿವಾದಿಯರ ಹೆಸರು ದಾಖಲಾಗಿವೆ ಎಂದರೆ ನನಗೆ ಗೊತ್ತಿಲ್ಲ.

23. ನನ್ನ ಅಣ್ಣ ತಮ್ಮಂದಿಯರು ದಾವಾ ಆಸ್ತಿಯಲ್ಲಿ ನಮ್ಮ ತಂದೆ ಕಟ್ಟಿದ ಮನೆಯಲ್ಲಿ ವಾಸ ಇದ್ದಾರೆ. ದಾವಾ ಆಸ್ತಿಯಲ್ಲಿ ನಮ್ಮ ತಂದೆ ಮನೆ ಕಟ್ಟಿ

ಅಂದಾಜು 15 ವರ್ಷಗಳಾಗಿದೆ. ನಮ್ಮ ತಂದೆ ಕಟ್ಟಿದ ಮನೆಗೆ ಮನೆ ನಂಬರ ಕೊಟ್ಟಿದ್ದಾರೋ ಇಲ್ಲವೊ ನನಗೆ ಗೊತ್ತಿಲ್ಲ.

24. ದಾವಾ ಆಸ್ತಿಯಲ್ಲಿಯ ಮನೆ ಮತ್ತು ಖುಲ್ಲಾ ಜಾಗಾಗಳಿಗೆ ಗ್ರಾಮ ಪಂಚಾಯತಿಯ ದಾಖಲೆಯಲ್ಲಿ ಪ್ರತಿವಾದಿಯರ ಹೆಸರು ದಾಖಲಾಗಿದ್ದನ್ನು ಪ್ರಶ್ನಿಸಿ ನಾನು ಬೇರೆ ಯಾವುದೇ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿಲ್ಲ. ದಾವಾ ಆಸ್ತಿಯಲ್ಲಿಯ ಮನೆಗಳು ಪಶ್ಚಿಮದಿಂದ ಪೂರ್ವದ ಕಡೆ ಇವೆ ಎಂದರೆ ಸರಿ. ದಾವಾ ಆಸ್ತಿಯ ಉತ್ತರಕ್ಕೆ 10 ಮನೆಗಳಿವೆ ಎಂದರೆ ಸರಿ. ದಕ್ಷಿಣಕ್ಕೆ 12 ಮನೆಗಳಿವೆ ಎಂದರೆ ಸರಿ.

25. ನನ್ನ ವಾದ ಪತ್ರದಲ್ಲಿ ದಾವಾ ಆಸ್ತಿಗಳಲ್ಲಿ ಪ್ರತಿವಾದಿಯರು ಮನೆ ಕಟ್ಟಿದ್ದಾರೆಂದು ಹೇಳಿದ್ದೇನೆ ಎಂದರೆ ಸರಿ. ನಮ್ಮ ತಂದೆ ದಾವಾ ಆಸ್ತಿಯಲ್ಲಿ ಮನೆ ಕಟ್ಟಲು ಎಷ್ಟು ಹಣ ಖರ್ಚು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಪ್ರತಿವಾದಿಯರಿಗೆ ಬರೆದುಕೊಟ್ಟ ಖರೀದಿ ಪತ್ರಗಳಿಗೆ ನನ್ನ ತಂದೆ, ನನ್ನ ತಾಯಿ ಹಾಗೂ ನನ್ನ ಅಣ್ಣ ತಮ್ಮಂದಿಯರು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

26. ದಿಃ 20/11/2009 ರಂದು ಪ್ಲಾಟ ನಂ.28 ರ 33 ಅಡಿಗೆ 33ಅಡಿ ವಿಸ್ತೀರ್ಣಕ್ಕೆ 3ನೇ ಪ್ರತಿವಾದಿಯ ಹೆಸರಿಗೆ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ಲಾಟ ನಂ.28 ಕ್ಕೆ ಪಂಚಾಯತಿಯವರು ಆಸ್ತಿ

ನಂಬರ ****20730 ಎಂದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರದಲ್ಲಿ ನಿರ್ದಿಷ್ಟ ಚಕ್ಕಬಂದಿ ಹಾಕಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

27. ದಿಃ05/01/2011 ರಂದು ನನ್ನ ತಂದೆ 4ನೇ ಪ್ರತಿವಾದಿಗೆ ಪ್ಲಾಟ ನಂ.27 ಮನೆ ನಂ.407 ರ ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 33 ಅಡಿಗೆ 33ಅಡಿ ಎಂದರೆ ನನಗೆ ಗೊತ್ತಿಲ್ಲ.

28. ದಿಃ05/01/2011 ರಂದು ನನ್ನ ತಂದೆ 5ನೇ ಪ್ರತಿವಾದಿಗೆ ಮನೆ ನಂ.408 ರ ಆಸ್ತಿ ನಂ.20727ನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 33 ಅಡಿಗೆ 33ಅಡಿ ಎಂದರೆ ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿ ಜೀವಿತ ಇದ್ದಾರೋ ಮೃತಪಟ್ಟಿದ್ದಾರೊ ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿ ಈಗ ಮೃತಪಟ್ಟಿದ್ದು ಅವರ ಆಸ್ತಿಗೆ ಮಕ್ಕಳು ವಾರಸುದಾರರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

29. ದಿಃ05/01/2011 ರಂದು ನನ್ನ ತಂದೆ 6ನೇ ಪ್ರತಿವಾದಿಗೆ ಆಸ್ತಿ ನಂ.312 ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 31 ಅಡಿಗೆ 35ಅಡಿ ಎಂದರೆ ನನಗೆ ಗೊತ್ತಿಲ್ಲ.

30. ದಿಃ15/07/2008 ರಂದು ನನ್ನ ತಂದೆ 7ನೇ ಪ್ರತಿವಾದಿಗೆ ಪ್ಲಾಟ ನಂ.25 ಆಸ್ತಿ ನಂ.314 ನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 31 ಅಡಿಗೆ 35ಅಡಿ ಎಂದರೆ ನನಗೆ ಗೊತ್ತಿಲ್ಲ.

31. ದಿಃ20/12/2010 ರಂದು ನನ್ನ ತಂದೆ 9ನೇ ಪ್ರತಿವಾದಿಗೆ ವಿ.ಪಿ.ಸಿ. ನಂ.1537 ನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 31 ಅಡಿಗೆ 16ಅಡಿ ಎಂದರೆ ನನಗೆ ಗೊತ್ತಿಲ್ಲ.

32. ಅದೇ ರೀತಿ ದಿಃ20/12/2010 ರಂದು ನನ್ನ ತಂದೆ 10ನೇ ಪ್ರತಿವಾದಿಗೆ ವಿ.ಪಿ.ಸಿ. ನಂ.469 ನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 31 ಅಡಿಗೆ 16ಅಡಿ ಎಂದರೆ ನನಗೆ ಗೊತ್ತಿಲ್ಲ.

33. ಅದೇ ರೀತಿ ದಿಃ03/02/2010 ರಂದು ನನ್ನ ತಂದೆ 11ನೇ ಪ್ರತಿವಾದಿಗೆ ವಿ.ಪಿ.ಸಿ. ನಂ.456 ನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 01ಗುಂಟೆ ಎಂದರೆ ನನಗೆ ಗೊತ್ತಿಲ್ಲ.

34. ದಿಃ20/12/2010 ರಂದು ನನ್ನ ತಂದೆ 12ನೇ ಪ್ರತಿವಾದಿಗೆ ವಿ.ಪಿ.ಸಿ. ನಂ.416 ನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 31 ಅಡಿಗೆ 32ಅಡಿ  ಎಂದರೆ ನನಗೆ ಗೊತ್ತಿಲ್ಲ.

35. ದಿಃ 03/09/2010 ರಂದು ನನ್ನ ತಂದೆ 14ನೇ ಪ್ರತಿವಾದಿಗೆ ಪ್ಲಾಟ ನಂ.5 ವಿ.ಪಿ.ಸಿ. ನಂ.470 ನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 31 ಅಡಿಗೆ 35ಅಡಿ ಎಂದರೆ ನನಗೆ ಗೊತ್ತಿಲ್ಲ.

36. ದಿಃ 05/07/2008 ರಂದು ನನ್ನ ತಂದೆ 16ನೇ ಪ್ರತಿವಾದಿಯ ತಾಯಿ ಇಂದ್ರವ್ವ ಇವರಿಗೆ ಪ್ಲಾಟ ನಂ.6 ಮತ್ತು 7 ವಿ.ಪಿ.ಸಿ. ನಂ.311 ನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 72 ಅಡಿಗೆ 31ಅಡಿ ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ ಇಂದ್ರವ್ವ ಇವರು ತಾವು ಖರೀದಿ ಮಾಡಿದ ಆಸ್ತಿಯನ್ನು ಅವರ ಮಗ ಶ್ರೀಕಾಂತ, ಮಗಳು ಮಾಲಾ ಹಾಗೂ ಅಳೀಯ ಆನಂದ ಇವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರ ಹೆಸರು ದಾಖಲ ಮಾಡುವುದಕ್ಕಿಂತ ಪೂರ್ವದಲ್ಲಿ ಪಂಚಾಯತಿಯವರು ಕಾನೂನುಬದ್ಧವಾಗಿ ಎಲ್ಲರಿಗೂ ನೋಟೀಸು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

37. ದಿಃ 07/01/2011 ರಂದು ನನ್ನ ತಂದೆ 17ನೇ ಪ್ರತಿವಾದಿಗೆ ವಿ.ಪಿ.ಸಿ. ನಂ.409 ನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 31 ಅಡಿಗೆ 31ಅಡಿ ಎಂದರೆ ನನಗೆ ಗೊತ್ತಿಲ್ಲ.

38. ದಿಃ 30/01/2012 ರಂದು ನನ್ನ ತಂದೆ 18ನೇ ಪ್ರತಿವಾದಿಗೆ ವಿ.ಪಿ.ಸಿ. ನಂ.757 ನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 31 ಅಡಿಗೆ 31ಅಡಿ ಎಂದರೆ ನನಗೆ ಗೊತ್ತಿಲ್ಲ. ನಂತರ

ಅಪ್ರತಿವಾದಿ 18 ರವರು ತಾವು ಖರೀದಿ ಮಾಡಿದ ಆಸ್ತಿಯನ್ನು ಪ್ರೀಯಾ ಬಸವರಾಜ ತುಪ್ಪದ ಇವರಿಗೆ ದಿಃ 13/12/2018 ರಂದು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

39. ಸದರಿ ಖರೀದಿ ಪತ್ರದ ಆಧಾರದ ಮೇಲೆ ಪ್ರೀಯಾ ಬಸವರಾಜ ತುಪ್ಪದ ಇವರ ಹೆಸರು ವಿ.ಪಿ.ಸಿ.ನಂ.757 ಕ್ಕೆ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರೀಯಾ ಬಸವರಾಜ ತುಪ್ಪದ ಇವರು ಪಂಚಾಯತಿಯಿಂದ ಅನುಮತಿ ಪಡೆದು ಅಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪಂಚಾಯತಿಯವರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಪ್ರೀಯಾ ಬಸವರಾಜ ತುಪ್ಪದ ಇವರಿಗೆ ಮನೆ ಕಟ್ಟಿಕೊಳ್ಳಲು ಅನುಮತಿ ಕೊಟ್ಟ ಪ್ರಕಾರ ಸದರಿಯವರು ಅಲ್ಲಿ ಮನೆ ಕಟ್ಟಿಕೊಂಡು ಈಗ ಆ ಮನೆಯಲ್ಲಿಯೆ ವಾಸ ಇದ್ದಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ